**ದಿನಾಂಕಃ 31.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಎರಡನೇ ಎದುರುದಾರರ ಪರ ವಕೀಲರಿಂದಃ–**

ನಮ್ಮ ಕಂಪನಿ ಯರಮಾರನಹಳ್ಳಿ ಗ್ರಾಮದಲ್ಲಿದೆ. ನಾವು ಈ ಅರ್ಜಿಯಲ್ಲಿ ಹೇಳಿರುವ ನಮ್ಮ ಕಂಪನಿಯ ವಿಳಾಸ ಹಾಗೂ ಅ.ದಾ.ಸಂ.215/2016 ರಲ್ಲಿ ನಮ್ಮ ಕಂಪನಿಯ ವಿಳಾಸ ಎರಡೂ ಒಂದೇ ಇರುತ್ತದೆ ಎಂದರೆ ಸರಿಯಲ್ಲ. ಎರಡೂ ಒಂದೇ ವಿಳಾಸ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2016 ರಲ್ಲಿ ನಮ್ಮ ಕಂಪನಿಯಲ್ಲಿ ಯಾರು ಮ್ಯಾನೇಜರ್ ಆಗಿದ್ದರು ಎಂದು ನನಗೆ ಗೊತ್ತಿಲ್ಲ. ಈಗ ನಾನು ಇದ್ದೇನೆ. ಈ ಅರ್ಜಿಯ 5 ನೇ ಎದುರುದಾರರು ಯಾವ ವಿಳಾಸದಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಅರ್ಜಿಯನ್ನು ಯಾವ ಕಾರಣಕ್ಕಾಗಿ ಹಾಕಲಾಗಿದೆ ಎಂದು ತಿಳಿದುಕೊಂಡಿದ್ದೇನೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ವಿಚಾರ ಬರೆದಿದೆ ಎಂದು ತಿಳಿದುಕೊಂಡಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಚಾರಗಳನ್ನು ನಮ್ಮ ಅಧಿಕಾರಿ ಅನಿತಾ ರಾಮಚಂದ್ರರವರು ಬರೆಸಿರುತ್ತಾರೆ. ಆ ಕಾರಣ ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಲಿಮಿಟೇಷನ್ ಅರ್ಜಿಯನ್ನು ನಾನೇ ಸಲ್ಲಿಸಿರುತ್ತೇನೆ. ಅ.ದಾ.ಸಂ.215/2016 ರ ದಾವೆ ಯಾವಾಗ ಡಿಕ್ರಿಯಾಯಿತು ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ದಾವೆ ಡಿಕ್ರಿಯಾಗಿರುವ ಬಗ್ಗೆ ನನಗೆ ತಿಳಿದಿರುತ್ತದೆ. ನಮ್ಮ ಮ್ಯಾನೇಜರ್ಗೆ ವಿಚಾರಣೆ ಕೊಡಲು ಅವರಿಗೆ ಆನಾರೋಗ್ಯ ಇದೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿಲ್ಲ. ದಾಖಲೆಯನ್ನು ಕೊಡಲು ತೊಂದರೆ ಇಲ್ಲ. ಅ.ದಾ.ಸಂ.215/2016 ರಲ್ಲಿ ನಮ್ಮ ಕಂಪನಿಗೆ ಹಾಗೂ

ಆ ದಾವೆಯ 4 ನೇ ಪ್ರತಿವಾದಿಗೆ ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಸಂಸ್ಥೆಗೆ ನೋಟಿಸು ಬಂದಿದ್ದು ನಾವು ಅದನ್ನು ತೆಗೆದುಕೊಳ್ಳದೆ ಸುಳ್ಳು ಷರಾ ಬರೆಸಿ ವಾಪಸ್ಸು ಕಳುಹಿಸಿದ್ದೇವೆ ಎಂದರೆ ಸರಿಯಲ್ಲ. ಸಮನ್ಸ್ ನಲ್ಲಿ ಏನು ಷರಾ ಬರೆದಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಅ.ದಾ.ಸಂ.215/2016 ನಡೆಯುತ್ತಿದ್ದ ವಿಚಾರ ನಮ್ಮ ಹಿಂದಿನ ಮ್ಯಾನೇಜರ್ ರಂಗಪ್ಪಸ್ವಾಮಿ ರವರಿಗೆ ತಿಳಿದಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸರಸ್ವತಮ್ಮ ಹಾಗೂ ನಮ್ಮ ಫ್ಯಾಕ್ಟರಿ ಬಳಿ ಬಂದಾಗ ಕೇಸು ಆಗಿರುವ ವಿಚಾರ ನಮಗೆ ಗೊತ್ತಾಯಿತು ಎಂದು ಹೇಳುತ್ತಾರೆ. 2016 ರಲ್ಲಿ ನಮ್ಮ ಕಂಪನಿಯನ್ನು ಮಾರಿ ವಿಳಾಸ ಬಿಟ್ಟಿರುತ್ತಾರೆ ಎಂದು ಸಮನ್ಸ್ ವಾಪಸ್ಸು ಬಂದಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕಂಪನಿ ಈಗಲೂ ಸಹ ಅದೇ ವಿಳಾಸದಲ್ಲಿ ಇರುತ್ತದೆ .

ನ್ಯಾಯಾಲಯದ ಆದೇಶದ ಪ್ರಕಾರ ಸಮನ್ಸ್ ಅನ್ನು ಪೇಪರ್ ಮೂಲಕ ತೆಗೆದುಕೊಳ್ಳಲಾಗಿತ್ತು ಎಂದರೆ ಸಾಕ್ಷಿಯು ಪೇಪರ್ ಅಲ್ಲಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಅನಿತಾ ರಾಮಚಂದ್ರರವರು ನಮ್ಮ ಮಾಲೀಕರು. 2016 ರಲ್ಲಿ ನನಗೆ ಅ.ದಾ.ಸಂ.215/2016 ರ ಮಾಹಿತಿ ಇದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಸಿಜೆಎಂ ಚಿಕ್ಕಬಳ್ಳಾಪುರ.**